ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕ, 1977

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದೂ ಕೂಡ ಸಮಾಜದಲ್ಲಿ ಬಹಳಷ್ಟು ಪರಿಣಾಮವಾಗತಕ್ಕ ಮತ್ತು ಪರಿವರ್ತನೆ ತರತಕ್ಕ ಕಾನೂನು ಇದ್ದ ಕಾರಣ ನನ್ನ ಮನವಿ ಏನೆಂದರೆ ಇದನ್ನು ಜಂಟಿ ಸಲಹಾ ಸಮಿತಿಗೆ ರೆಫರ್ ಮಾಡಿದರೆ ಒಳ್ಳೆಯದು; ಇದು ಅಲ್ಲಿ ಚರ್ಚೆಯಾಗಿ ನಂತರ ಇಲ್ಲಿ ಬಂದು ಪಾಸ್ ಆದರೆ ಉತ್ತಮವೆಂದು ನನ್ನ ವೈಯಕ್ತಿಕ ಅಭಿಪ್ರಾಯ, ಇಲ್ಲ, ಇಲ್ಲೇ ಚರ್ಚೆ ಮಾಡಿ ಪಾಸ್ ಮಾಡುತ್ತೇವೆಂದರೆ ಅದು ನಿಮಗೆ ಬಿಟ್ಟಿದ್ದು. ಬೇಕಾದರೆ ಅದರ ಬಗ್ಗೆ ನಾಳೆ ಪ್ರಸ್ತಾಪ ಮಾಡೋಣ.

ಶ್ರೀ ಆರಗ ಜ್ಞಾನೇಂದ್ರ : ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗಿರುವುದರಿಂದ ದಯಮಾಡಿ ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಸಹಕಾರ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕ ವಿಧೇಯಕವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಕೃಷಿ ಮಾರುಕಟ್ಟೆ ರಾಜ್ಯ ಮಂತ್ರಿಗಳದ್ದು ಒಂದು ವಿಧೇಯಕ

ಹಿಂದಕ್ಕೆ ತೆಗೆದುಕೊಳ್ಳುವುದು ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾವುದೂ ಇಲ್ಲವಲ್ಲ, ಯಾವುದು ಅದು?

ಶ್ರೀ ಎಂ.ಪಿ. ನಾಣಯ್ಯ : ಇದು ಆರ್ಡಿನೆನ್ಸ್ ರೀಪ್ಲೇಸಿಂಗ್ ಆಗಿತ್ತು. ಆರ್ಡಿನೆನ್ಸ್ ರೀಪ್ಲೇಸಿಂಗ್ ಅನ್ನು ಮುಂಚೆಯೇ ಮಾಡಿದ್ದೆವು. ಆರ್ಡಿನೆನ್ಸ್ ಲ್ಯಾಪ್ಸ್ ಆಯಿತು. ಲ್ಯಾಪ್ಸ್ ಆದ ಮೇಲೆ ಬಿಲ್ ವಿತ್‌ಡ್ರಾ ಮಾಡಬೇಕಾಗುತ್ತದೆ. ಮೊದಲು ಮಾಡಿರತಕ್ಕ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುತ್ತೇವೆ. ಇನ್ನೊಂದು ಹಾಗೇ ಇದೆ. ನಾಮಿನೇಷನ್ ಮಾಡುತ್ತಿರತಕ್ಕ ಬಿಲ್ ಇದೆ. ಈಗ ಆರ್ಡಿನೆನ್ಸ್ ಲ್ಯಾಪ್ಸ್ ಆದದ್ದನ್ನು ವಿತ್‌ಡ್ರಾ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆರ್ಡಿನೆನ್ಸ್ ಲ್ಯಾಪ್ಸ್ ಆದಮೇಲೆ ಪುನಃ ಇವರು ಏನು ಮಾಡಿದರೆಂದರೆ, ಇನ್ನೊಂದು ಆರ್ಡಿನೆನ್ಸ್ ಇಶ್ಯೂ ಮಾಡಿ ನಾಮಿನೇಷನ್ ಮಾಡಿ ಎಲೆಕ್ಷನ್ ಮಾಡಿಕೊಂಡರು.

MR. SPEAKER : That will come up before the House. It has its life. This has to be withdrawn.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ)

ಎರಡನೇ ತಿದ್ದುಪಡಿ ವಿಧೇಯಕ *1977:*

ವಿಧೇಯಕವನ್ನು ಹಿಂದಕ್ಕೆ ಪಡೆಯುವುದು

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಅನುಮತಿ ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ;

"1997ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಸಭೆಯು ಅನುಮತಿ ನೀಡುವುದು;

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಹಿಂದಕ್ಕೆ ಪಡೆಯಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಿಂದಕ್ಕೆ ಪಡೆದ ವಿಧೇಯಕದ ಸಂಖ್ಯೆ ಹನ್ನೆರಡೋ ಆಥವಾ ಯಾವುದು? ಎರಡು ಆರ್ಡಿನೆನ್ಸ್ ಹೊರಡಿಸಿದ್ದೀರಲ್ಲಾ ಅದರಲ್ಲಿ ಯಾವುದು?